# Karnataka Excise SI Syllabus and Exam Pattern

SHIKARAT.COM
Online Education

## 10.1 ಸ್ಪರ್ಧಾತ್ಮಕ ಪರೀಕ್ಷೆ:-

ಈ ಹುದ್ದೆಗಳ ನೇಮಕಾತಿಯನ್ನು ಕೆಳಕಂಡ ರೀತಿಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ನಡೆಸುವ ಮೂಲಕ ಮಾಡಲಾಗುವುದು.

SHIKARAT.COM

ಈ ಸ್ಪರ್ಧಾತ್ಮಕ ಪರೀಕ್ಷೆಯು ಪದವಿ ಮಟ್ಟದ್ದಾಗಿದ್ದು, ಎರಡು ಪತ್ರಿಕೆಗಳನ್ನು ಒಳಗೊಂಡಿರುತ್ತದೆ.

| ಕ್ರಮ ಸಂಖ್ಯೆ | ಪತ್ರಿಕೆ | ನಿಗದಿಪಡಿಸಿದ ಒಟ್ಟು ಅಂಕಗಳು | ಪರೀಕ್ಷೆಯ ಕಾಲಾವಧಿ |
|---|---|---|---|
| 1 | ಪತ್ರಿಕೆ-1:- ಇದರಲ್ಲಿ ಎರಡು ಭಾಗಗಳಿರುತ್ತವೆ. | | |
| | ಭಾಗ-1:- ಕನ್ನಡ ಅಥವಾ ಆಂಗ್ಲ ಭಾಷೆಯಲ್ಲಿ ಪ್ರಬಂಧ ಬರೆಯುವುದು | 30 ಅಂಕಗಳು | |
| | ಭಾಗ-2:- ಕನ್ನಡದಿಂದ ಆಂಗ್ಲ ಭಾಷೆಗೆ ಮತ್ತು ಆಂಗ್ಲ ಭಾಷೆಯಿಂದ ಕನ್ನಡಕ್ಕೆ ಭಾಷಾಂತರಿಸುವುದು. | 20 ಅಂಕಗಳು | |
| | ಒಟ್ಟು | 50 ಅಂಕಗಳು | 1 ½ ಗಂಟೆಗಳು |
| 2 | ಪತ್ರಿಕೆ-2:- ಸಾಮಾನ್ಯ ಅಧ್ಯಯನ:- ಇದರಲ್ಲಿ ಸಾಮಾನ್ಯ ಜ್ಞಾನ, ವಿಜ್ಞಾನ, ಭೂಗೋಳ, ಇತಿಹಾಸ, ಸಂವಿಧಾನ, ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿ ಮತ್ತು ಸಾಮಾನ್ಯ ಮಾನಸಿಕ ಸಾಮರ್ಥ್ಯಗಳಿಗೆ ಸಂಬಂಧಿಸಿದ ಪ್ರಶ್ನೆಗಳಿದ್ದು ಈ ಪತ್ರಿಕೆಯು "ವಸ್ತುನಿಷ್ಠ ಬಹು ಆಯ್ಕೆ" (Objective multiple choice ) ಮಾದರಿಯದಾಗಿದೆ | 150 ಅಂಕಗಳು | 1 ½ ಗಂಟೆಗಳು |

SHIKARAT.COM

ಯಾವುದೇ ಪತ್ರಿಕೆಗೆ ಕನಿಷ್ಠ ಅರ್ಹತಾ ಅಂಕಗಳನ್ನು ನಿಗದಿಪಡಿಸಿರುವುದಿಲ್ಲ. ಎರಡು ಪತ್ರಿಕೆಗಳಲ್ಲಿ ಅಭ್ಯರ್ಥಿಗಳು ಗಳಿಸಿದ ಅಂಕಗಳನ್ನು ಆಧರಿಸಿ ಅರ್ಹತಾ ಪಟ್ಟಿಯನ್ನು ಸಿದ್ಧಪಡಿಸಲಾಗುವುದು. ಸದರಿ ಹುದ್ದೆಗಳ ನೇಮಕಾತಿಯ ಸ್ಪರ್ಧಾತ್ಮಕ ಪರೀಕ್ಷೆಯ ಪತ್ರಿಕೆ -2 ಅನ್ನು ಆಫ್ ಲೈನ್-ಓ.ಎಂ.ಆರ್ ಮಾದರಿ (Offline- OMR type) ಅಥವಾ ಗಣಕಯಂತ್ರದ ಮೂಲಕ ನೇಮಕಾತಿ ಪರೀಕ್ಷೆ (Computer based Recruitment Test-CBRT) ಮುಖಾಂತರ ನಡೆಸಲಾಗುವುದು. ಗಣಕಯಂತ್ರದ ಮೂಲಕ ನೇಮಕಾತಿ *ಪರೀಕ್ಷೆ* (Computer based Recruitment Test-CBRT) ಯನ್ನು ನಡೆಸಲು ಆಯೋಗದ ತೀರ್ಮಾನವಾದಲ್ಲಿ ಅಭ್ಯರ್ಥಿಗಳಿಗೆ ಈ ಸಂಬಂಧ ಸೂಚನೆಗಳನ್ನು ಹಾಗೂ ಅಣಕು ಪರೀಕ್ಷೆಯನ್ನು (Mock Test) ತೆಗೆದುಕೊಳ್ಳುವ ಬಗ್ಗೆ ಮಾಹಿತಿಯನ್ನು ಆಯೋಗದ ಅಂತರ್ಜಾಲದಲ್ಲಿ ಪ್ರಕಟಿಸಲಾಗುವುದು.

SHIKARAT.COM

ಸ್ಪರ್ಧಾತ್ಮಕ ಪರೀಕ್ಷೆಗೆ ಪ್ರವೇಶ ಪತ್ರಗಳನ್ನು ಪ್ರತ್ಯೇಕವಾಗಿ ಕಳುಹಿಸಲಾಗುವುದಿಲ್ಲ. ಆಯೋಗದ ಅಂತರ್ಜಾಲದಿಂದ ಡೌನ್ಲೋಡ್ ಮಾಡಿಕೊಳ್ಳಲು ಅವಕಾಶ ಕಲ್ಪಿಸಿ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದು. ಆಗ ಅಭ್ಯರ್ಥಿಗಳು ಪ್ರವೇಶ ಪತ್ರವನ್ನು ಡೌನ್ಲೋಡ್ ಮಾಡಿಕೊಂಡು ನೇಮಕಾತಿ ಪ್ರಕ್ರಿಯೆ ಮುಗಿಯುವವರೆಗೆ ಭದ್ರವಾಗಿಟ್ಟುಕೊಳ್ಳತಕ್ಕದ್ದು. ಯಾವುದೆ ಕಾರಣಕ್ಕೆ ಈ ಪ್ರವೇಶ ಪತ್ರದ ನಕಲು ಪ್ರತಿ ಪಡೆಯಲು ಅವಕಾಶ ಇರುವುದಿಲ್ಲ.

SHIKARAT.COM

(ಅ) ಶಾರೀರಿಕ ದಾರ್ಢ್ಯತೆಗೆ ಸಂಬಂಧಿಸಿದ ಷರತ್ತುಗಳು:-

<table>
<tr><th>ಶಾರೀರಿಕ ದಾರ್ಢ್ಯತೆ</th><th>ಪುರುಷ</th><th>ಮಹಿಳೆ</th></tr>
<tr><td>ಎತ್ತರ</td><td>163 ಸೆಂ.ಮೀ.</td><td>157 ಸೆಂ.ಮೀ.</td></tr>
<tr><td>ತೂಕ</td><td>-</td><td>49.9 ಕಿ.ಗ್ರಾಂ</td></tr>
<tr><td>ಎದೆಯ ಸುತ್ತಳತೆ (ನಿಶ್ವಾಸ ಸ್ಥಿತಿಯಲ್ಲಿ)</td><td>81 ಸೆಂ.ಮೀ. ಗಿಂತ ಕಡಿಮೆ ಇರಬಾರದು</td><td rowspan="2">ಅನ್ವಯಸುವುದಿಲ್ಲ</td></tr>
<tr><td>ಉಚ್ಛ್ವಾಸ ಸ್ಥಿತಿಯಲ್ಲಿ ವಿಸ್ತರಣೆ</td><td>5 ಸೆ.ಮೀ.ಹೆಚ್ಚಳವಾಗಬೇಕು.</td></tr>
</table>

(ಆ) ದೃಷ್ಟಿ ಸಾಮರ್ಥ್ಯ:-

SHIKARAT.COM

<table>
<tr><th colspan="2">ದೂರದ ದೃಷ್ಟಿ (Distant Vision)</th><th colspan="2">ಹತ್ತಿರದ ದೃಷ್ಟಿ (Near Vision)</th></tr>
<tr><td>ದೋಷರಹಿತ ದೃಷ್ಟಿ</td><td>ದೋಷಪೂರಿತ ದೃಷ್ಟಿ</td><td>ದೋಷರಹಿತ ದೃಷ್ಟಿ</td><td>ದೋಷಪೂರಿತ ದೃಷ್ಟಿ</td></tr>
<tr><td>6/6 mtrs</td><td>6/9 mtrs</td><td rowspan="3">0/6 mtrs</td><td rowspan="3">0/8 mtrs</td></tr>
<tr><td colspan="2">ಅಥವಾ</td></tr>
<tr><td>6/6</td><td>6/12</td></tr>
</table>

ಪ್ರತಿಯೊಂದು ಕಣ್ಣು ಸಂಪೂರ್ಣ ಕ್ಷೇತ್ರ ದೃಷ್ಟಿ ಹೊಂದಿರಬೇಕು. ವರ್ಣಾಂಧತೆ (Colour blindness), ಮೆಳ್ಳಗಣ್ಣು (Squint eye) ಅಥವಾ ಯಾವುದೇ ಕಣ್ಣಿನ/ರೆಪ್ಪೆಯ ವಿಕೃತ ಸ್ಥಿತಿಯನ್ನು (morbid conditions) ಅನರ್ಹತೆ ಎಂದು ಪರಿಗಣಿಸಲಾಗುವುದು.

SHIKARAT.COM

SHIKARAT.COM

(೩) ಈ ಹುದ್ದೆಯ ಅಭ್ಯರ್ಥಿಗಳ ದೈಹಿಕ ಸಾಮರ್ಥ್ಯದ ಬಗ್ಗೆ ಕೆಳಕಂಡ ಪರೀಕ್ಷೆಗಳನ್ನು ನಡೆಸಲಾಗುವುದು.

| ಕ್ರ.ಸಂ. | ಪುರುಷ | | ಮಹಿಳೆ/ಮಾಜಿ ಸೈನಿಕ | |
|---|---|---|---|---|
| | ಪರೀಕ್ಷೆ | ಅರ್ಹತಾ ಸಮಯ / ದೂರ | ಪರೀಕ್ಷೆ | ಅರ್ಹತಾ ಸಮಯ / ದೂರ |
| 1. | 100 ಮೀಟರ್ ಓಟ | 15 ಸೆಕೆಂಡುಗಳು | 100 ಮೀಟರ್ ಓಟ | 18.05 ಸೆಕೆಂಡುಗಳು |
| 2. | ಎತ್ತರ ಜಿಗಿತ | 1.20 ಮೀಟರ್ | ಎತ್ತರ ಜಿಗಿತ | 0.9 ಮೀಟರ್ |
| 3. | ಉದ್ದ ಜಿಗಿತ | 3.80 ಮೀಟರ್ | ಉದ್ದ ಜಿಗಿತ | 2.50 ಮೀಟರ್ |
| 4. | ಗುಂಡೆಸೆತ(7.26 ಕೆ.ಜಿ) | 5.60 ಮೀಟರ್ | ಗುಂಡೆಸೆತ (4 ಕೆ.ಜಿ.) | 3.75 ಮೀಟರ್ |
| 5. | 800 ಮೀಟರ್ ಓಟ | 2 ನಿಮಿಷ 50 ಸೆಕೆಂಡುಗಳು | 200 ಮೀಟರ್ ಓಟ | 40 ಸೆಕೆಂಡುಗಳು |

SHIKARAT.COM

- ಅಭ್ಯರ್ಥಿಗಳು ಮೇಲಿನ 5 ದೈಹಿಕ ಸಾಮರ್ಥ್ಯಗಳ ಪೈಕಿ 3 ರಲ್ಲಿ ಉತ್ತೀರ್ಣರಾಗಬೇಕು.
- ದೈಹಿಕ ಸಾಮರ್ಥ್ಯ ಪರೀಕ್ಷೆಗೆ ಯಾವುದೇ ಅಂಕಗಳನ್ನು ನಿಗದಿಪಡಿಸಿರುವುದಿಲ್ಲ. ಇದು ಕೇವಲ ಅರ್ಹತಾದಾಯಕ ಪರೀಕ್ಷೆಯಾಗಿರುತ್ತದೆ.

SHIKARAT.COM

- ಆಯೋಗವು ಈ ದೇಹದಾರ್ಢ್ಯತೆ ಮತ್ತು ದೈಹಿಕ ಸಾಮರ್ಥ್ಯ ಪರೀಕ್ಷೆಯನ್ನು ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳಿಂದ ನೇತೃತ್ವಗೊಂಡ ಸಮಿತಿಯು ನಡೆಸುವುದು. ಈ ಸಮಿತಿಯಲ್ಲಿ ಜಿಲ್ಲೆಯ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿದ್ದು, ಜಿಲ್ಲಾ ಶಸ್ತ್ರ ಚಿಕಿತ್ಸಕರು ಮತ್ತು ಜಿಲ್ಲಾ ಯುವಜನ ಸೇವಾ ಅಧಿಕಾರಿಗಳು ಸದಸ್ಯರಾಗಿರುತ್ತಾರೆ ಹಾಗೂ ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳು (ಅಬಕಾರಿ) ಸಮಿತಿಯ ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ.

<u>ಸೂಚನೆ</u>:: ಅಭ್ಯರ್ಥಿಯು ದೇಹಾ ದಾರ್ಢ್ಯತೆ ಪ್ರಮಾಣ ಪತ್ರ (Physical standard) ಸರ್ಕಾರಿ ಸಹಾಯಕ ಶಸ್ತ್ರ ಚಿಕಿತ್ಸಕರಿಗಿಂತ (Assistant Surgeon) ಕಡಿಮೆ ಇಲ್ಲದ ಮೇಲಿನ ದರ್ಜೆಯ ವೈದ್ಯಾಧಿಕಾರಿಯವರಿಂದ (ಸಹಿ, ಮೊಹರು ಮತ್ತು ಜಾರಿ ಮಾಡಿದ ದಿನಾಂಕದೊಂದಿಗೆ) ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ನಿಗದಿತ ನಮೂನೆಯಲ್ಲಿ ಪಡೆದಿಟ್ಟುಕೊಂಡಿರತಕ್ಕದ್ದು. ಪ್ರಮಾಣ ಪತ್ರದ ನಮೂನೆಯನ್ನು ಅನುಬಂಧ-2 ರಲ್ಲಿ ತೋರಿಸಲಾಗಿದೆ.

SHIKARAT.COM